(6ನೇ ಪುಟದಿಂದ)
ಋತುಮಾನಕ್ಕೆ ತಕ್ಕಂತೆ ವಿಭಿನ್ನ ಬಗೆಯ ಕಲಾತ್ಮಕ ವಿನ್ಯಾಸಗಳನ್ನು ಸೃಷ್ಟಿಸುತ್ತವೆ.

ಗಾಳಿಗಿಂತಲೂ ಹಗುರವಾದ, ಗಾಜಿಗಿಂತ ಪಾರದರ್ಶಕವಾದ, ಕೂದಲಿಗಿಂತ ನೂರುಪಾಲು ಸೂಕ್ಷ್ಮವಾದ ಇವುಗಳು ಹೆಚ್ಚಿನ ಸಲ ನಮ್ಮ ಕಣ್ಣಿಗೆ ಅಗೋಚರವಾಗಿರುವುದರಿಂದ ಇವುಗಳ ಬಗ್ಗೆ ನಮ್ಮ ಅರಿವು ಅಷ್ಟಕ್ಕಷ್ಟೆ?

ಮುಂಗಾರು ಮಳೆಯಲ್ಲಿ ಮುತ್ತಿನ ಹನಿಯನ್ನು ಹೊದ್ದಂತೆ ಕಾಣುವ ಇವನ್ನು ಕ್ಯಾಮರಾದ ಮೈಕ್ರೋ ಲೆನ್ಸ್ ಮುಖಾಂತರ ಪರಿಶೀಲಿಸಿ ಛಾಯಾಗ್ರಹಣ ಮಾಡಿದರೆ ಒಂದೊಂದು ಜಾತಿ ಜೇಡರ ಹುಳುವೂ ಒಂದೊಂದು ರೀತಿಯ ಬಲೆಗಳ ರಚನೆ. ವಿನ್ಯಾಸ ಹೊಂದಿರುವುದು ಕಂಡುಬರುತ್ತದೆ. ಈ ಜೇಡರ ಜಾಲವು ದೂರ ಸಂವೇದಿಯ ಅಸ್ತ್ರದಂತೆ ಅತಿ ವಿಶಿಷ್ಟ ಪಾತ್ರವಹಿಸುತ್ತದೆ.

ಜೇಡರ ಬಲೆ ನೇಯ್ದ ನೂಲೆ ಟೆಲಿಫೋನ್ ಸಂಪರ್ಕದಂತಹ ಬಾರ್ ಕೋಡಿಂಗ್ ಸಂಜ್ಞೆಯಾಗಿ ಅವುಗಳ ಭಾಷೆಯಾಗುತ್ತದೆ. ಹಲವು ಬಾರಿ ತಮ್ಮ ಈ ಸಂಜ್ಞೆಗಳೇ ಅವುಗಳ ಮರಿಗಳಿಗೆ ಸಾವಿನ ಜಾಲವಾಗುತ್ತವೆ. ಹುಟ್ಟಿದ ಕೂಡಲೆ ಬಲೆಯ ಜಾಲದಿಂದ ಪಾರಾಗದೆ ಮತ್ತೊಂದು ಬಲೆಯನ್ನೇನಾದರೂ ಹೊಕ್ಕರೆ, ಕೇವಲ ಕಂಪನ ಸಂಜ್ಞೆಗಳ ಮುಖಾಂತರ ಕೆಲಸ ಮಾಡುವ ತಾಯಿ ಜೇಡ ಹಿಂದು ಮುಂದು ನೋಡದೆ ಸ್ವಾಹಾ ಮಾಡಿಬಿಡುತ್ತದೆ. ಸಾಧಾರಣವಾಗಿ ನೆಲದ ಮೇಲೆ ನಡೆಯದ ಇವು ಒಂದು ಕೊಂಬೆಯನ್ನೋ ಮರದ ಕಾಂಡವನ್ನು ಏರಿ ನಾಭಿಯಿಂದಾದ ನೂಲನ್ನು ಗಾಳಿಯಲ್ಲಿ ತೇಲಿಬಿಟ್ಟು, ಆ ಸೂಕ್ಷ್ಮಾತಿ ಸೂಕ್ಷ್ಮ ತಂತು ತೇಲಾಡುತ್ತ, ಮತ್ತೊಂದು ಮರದ ಕೊಂಬೆಗೆ ತಾಗಿ ಹಿಡಿದ ಕೂಡಲೇ ನೇಯುವುದನ್ನು ನಿಲ್ಲಿಸಿ– ನಮ್ಮ ಕಾರ್ಟೂನ್ ಮತ್ತು ಸಿನಿಮಾ ಲೋಕದ ಸರ್ಕಸ್ ಕಲಾವಿದರನ್ನೂ ನಾಚಿಸುವಂತೆ– ಮತ್ತೊಂದು ಮರಕ್ಕೆ ತೂರಾಟದ ನಡಿಗೆ ಶುರುಮಾಡುತ್ತವೆ. ಇದರ ನೂಲು ಅದರ ದಪ್ಪಕ್ಕೆ ಹೋಲಿಸಿದರೆ ಅಷ್ಟೇ ಸಣ್ಣದಾದ ಉಕ್ಕಿನ ತಂತಿಗಿಂತ ನೂರು ಪಟ್ಟು ಬಲಿಷ್ಟವಾಗಿರುತ್ತದೆ ಎನ್ನುವುದು ವೈಜ್ಞಾನಿಕ ಸತ್ಯ.

ಇದಕ್ಕೆ ನಾಲ್ಕು ಜೊತೆ ಕಾಲುಗಳು ಅಂದರೆ ಅಷ್ಟಪದಿ. ಇತರೆ ಕೀಟಗಳಂತೆ ಇದಕ್ಕೆ ಮೀಸೆಗಳಿರುವುದಿಲ್ಲ. ನಮ್ಮ ಪಶ್ಚಿಮ ಘಟ್ಟದ ಪ್ರಮುಖ ಜೇಡಗಳೆಂದರೆ ಹುಲಿ ಜೇಡ, ಸುಂದರ ಬಲೆಯನ್ನು ನಿರ್ಮಿಸಿ ಮನುಷ್ಯನ ಕಣ್ಣಿಗೆ ಅದು ಕಲೆಯ ಅಭಿವ್ಯಕ್ತಿ ಎನಿಸಿದರೆ. ಈ ಜೇಡಕ್ಕೆ ಪಕ್ಷಿಗಳನ್ನು ಆಹಾರಕ್ಕಾಗಿ ಹಿಡಿಯಲು ಸೃಷ್ಟಿಸಿದ ಚಕ್ರವ್ಯೂಹ. ನಯವಾದ ಖೆಡ್ಡಾ ರೂಪಿಸಿ ದೂರ ಸರಿದು ಮಿಕ್ಕಿದ ಭೇಟಿಗಾಗಿ ಕಾದು ಕುಳಿತಿರುತ್ತದೆ. ಬಲೆಗೆ ಬಿದ್ದ ಪಕ್ಷಿ (ಮಿಕ) ಅದರಿಂದ ತಪ್ಪಿಸಿಕೊಳ್ಳಲು ಒದ್ದಾಡುತ್ತದೆ. ಆಗ ಜೇಡ ಅದರ ಕಾಲುಗಳನ್ನು ಅಲುಗಾಡಿಸದಂತೆ ಸುತ್ತ ಬಲೆ ನೇಯ್ದು ಅದನ್ನು ನಿಷ್ಕ್ರಿಯಗೊಳಿಸಿ ತಿಂದು ಹಾಕುತ್ತದೆ. ಕೆಲ ಜಾತಿಯ ಜೇಡಗಳು ಮುಂಜಾವಿನಲ್ಲಿ ಮಾತ್ರ ಬಲೆ ನೇಯ್ದು ಮಿಕಕ್ಕಾಗಿ ಕಾಯುತ್ತದೆ. ಕೆಲ ಜೇಡಗಳು ಬಲೆಗೆ ಬಿದ್ದ ಹುಳ–ಉಪ್ಪಟೆಗಳ ದೇಹದೊಳಗಿನ ರಸವನ್ನು ಮಾತ್ರ ಹೀರುತ್ತವೆ. ಪಾತರಗಿತ್ತಿಯನ್ನು ಬಿಡದೆ ಬೇಟೆಯಾಡುತ್ತವೆ. ಅದು ಜೇಡಗಳ ಮುಖ್ಯ ಆಹಾರ. ಸೊಳ್ಳೆ, ನೊಣ ಅಂದರೆ ಒಟ್ಟಾರೆ ಕೀಟಗಳೆ ಇದರ ಆಹಾರ. ಈ ಜೇಡಗಳ ಜೀವಿತಾವದಿ ಅತ್ಯಲ್ಪ, ಅಂದರೆ ಸಾಮಾನ್ಯವಾಗಿ ಒಂದು ವರ್ಷ ಕಾಲ. ಆದರೆ ಉತ್ತರ ಅಮೆರಿಕಾದ ಹಲವು ಜಾತಿಯ ಜೇಡ ನಾಲ್ಕಾರು ವರ್ಷಗಳು ಜೀವಿಸುತ್ತದೆ. ಪಶ್ಚಿಮ ಘಟ್ಟದ ಮಲೆನಾಡಿನಲ್ಲಿ ಕಪ್ಪೆಗಳನ್ನು, ಪಕ್ಷಿಗಳನ್ನು ಹಿಡಿದು ಹಾಕಿಬಿಡುವಷ್ಟು ಬೃಹತ್ ಗಾತ್ರದ ಜೇಡಗಳಿದ್ದಾವೆ. ಇವುಗಳು ಪಾಕಶಾಸ್ತ್ರ ಪ್ರವೀಣ. ತಮ್ಮ ಬೇಟೆಯನ್ನು ಬಾಯಲ್ಲಿ ಉತ್ಪತ್ತಿಯಾಗುವ ಒಂದು ಬಗೆಯ ವಿಶಿಷ್ಟ ವಿಷವನ್ನು (ರಸಾಯನಿಕ) ಅದಕ್ಕೆ ಚುಚ್ಚುತ್ತದೆ. ಆ ರಸಾಯನಿಕದ ಪ್ರಭಾವದಿಂದ ಚುಚ್ಚಿದ ಕೂಡಲೇ ಆ ಕೀಟಗಳ ಒಳಗಿನ ಅಂಗಾಂಗಗಳೆಲ್ಲಾ ಕರಗಿ ಸೂಪ್‌ನಂತಹ ದ್ರವವಾಗತೊಡಗುತ್ತದೆ. ಅನಂತರ ಜೇಡ ಹುಳುಗಳು ನಾವು ಸ್ಟ್ರಾದಿಂದ ಎಳನೀರು ಕುಡಿಯುವಂತೆ ಅದನ್ನು ಹೀರಿಬಿಡುತ್ತದೆ.



ಸರ್ವ ವ್ಯಾಪಿಯಾದ ಕೋಟ್ಯಾಂತರ ಜೇಡರ ಹುಳುಗಳು ಬಲೆ ನೇಯ್ದು ನಿತ್ಯವೂ ಅಗಣಿತ ಕೀಟಗಳನ್ನು ಹಿಡಿದು ಭಕ್ಷಿಸದಿದ್ದರೆ, ಇಂದು ಜಗತ್ತೆಲ್ಲಾ ಹುಳು ಹುಪ್ಪಟೆಗಳಿಂದ ತುಂಬಿ ಹೋಗುತ್ತಿತ್ತು! ಜೇಡನ ಕಣ್ಣಲ್ಲಿ ಎಲ್ಲರೂ ಸಮ! ಎಲ್ಲಾ ಕೀಟಗಳಿಗೂ ಒಂದೇ ನ್ಯಾಯ! ಯಾವುದೇ ತಾರತಮ್ಯವಲ್ಲದೆ ಸ್ವಜಾತಿಯ ಬಂಧುಗಳು ಬಂದರೂ ತಿಂದು ಹಾಕುತ್ತವೆ.

ನಾವು ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಈಗೀಗ ಸಾಧಿಸಲು ಸಾಧ್ಯವಾದಂತಹ ಅನೇಕ ಕುತೂಹಲಕರ ವಿಷಯಗಳನ್ನು ಈ ಕೀಟಗಳು ತಮ್ಮದೇ ಆದ ರೀತಿಯಲ್ಲಿ ಎಂದೋ ಸಾಧಿಸಿರುವುದು ವಿಚಿತ್ರವಾದರೂ ಸತ್ಯ!

ಆಸ್ಟ್ರೇಲಿಯಾದ ಬಿಳಿ ಬಾಲದ ಜೇಡ ಒಮ್ಮೆ ಕಚ್ಚಿತೆಂದರೆ ಮನುಷ್ಯನ ಮೂಳೆ ಕಾಣುವಂತೆ ಮಾಂಸ ಕರಗುತ್ತಲೆ ಹೋಗುವ ಕಾಯಿಲೆ– 'ಫ್ಲೆಶ್ ಈಟಿಂಗ್ ಡಿಸೀಸ್' ಆವರಿಸುತ್ತದೆ. ಇದೇ ರೀತಿ ಆಸ್ಟ್ರೇಲಿಯಾದ 'ವುಲ್ಫ್' ಜೇಡ ನೋಡಲು ಹೆದರಿಕೆ ಹುಟ್ಟಿಸುವಂತಿರುವುದಲ್ಲದೆ ಅದಕ್ಕಿಂತ ಅಪಾಯಕಾರಿ, ಅಘಾತಕಾರಿ ಅಂಶವೆಂದರೆ ಅದು ಜೀವಿಸುವ ಮಣ್ಣನ್ನೆ ವಿಷಮಯವನ್ನಾಗಿಸಿರುತ್ತದೆ.

ನಾಸಾದ ವಿಜ್ಞಾನಿಗಳ ತಂಡ ಈ ಜೇಡರ ಹುಳಕ್ಕೆ ದೈನಂದಿನ ಔಷಧ ರೂಪದಿಂದ ಹಿಡಿದು ಬಹುರೂಪದಲ್ಲಿ ಬಳಕೆಯಲ್ಲಿದ್ದ ದ್ರವ್ಯಗಳನ್ನು ಚುಚ್ಚಿ ಪರೀಕ್ಷಿಸಿದಾಗ ಬಂದಂತಹ ಫಲಿತಾಂಶ ಗಾಬರಿ ಹುಟ್ಟಿಸುವಂತಿತ್ತು.

'ಕೆಫೈನ್' ದ್ರವ್ಯ ಸೇವನೆಯಿಂದ ಜೇಡ ತಮ್ಮ ಬಲೆ ನೇಯುವ ಸಾಮರ್ಥ್ಯ ಕಳೆದುಕೊಂಡಿತು. ಅತ್ಯಲ್ಪ ಪ್ರಮಾಣದ 'ಮಾರಿಜುವಾನ' ಸೇವನೆಯಿಂದ ಉತ್ತಮ ಆರಂಭದಿಂದ ಕೂಡದ ಬಲೆ ನೇಯುವ ಕ್ರಿಯೆ ಮಧ್ಯದಲ್ಲೇ ನಿಂತು ಪೂರ್ತಿಗೊಳಿಸಲಾಗದೆ ಕೈಚೆಲ್ಲಿ ಕುಳಿತದ್ದು ಕಂಡುಬಂತು. ಇನ್ನು 'ಬೆನಜಡರೀನ್' ಸೇವನೆಯಿಂದ ಅತ್ಯಂತ ವೇಗದಿಂದ ಬಲೆ ನಿರ್ಮಾಣಕ್ಕೆ ತೊಡಗಿಕೊಂಡು ಯಾವುದೇ ರೀತಿಯ ಪ್ಲಾನಿಂಗ್ ಇಲ್ಲದ ನಮ್ಮ ಸರ್ಕಾರಿ ಕಾಮಗಾರಿಯಂತೆ ಇಡೀ ಬಲೆ ಅಸ್ತವ್ಯಸ್ತವಾಗಿ, ಬಲೆಯೆಲ್ಲಾ ದೊಡ್ಡ ದೊಡ್ಡ ರಂಧ್ರದಿಂದ ತುಂಬಿತ್ತು. ಅತೀವ ವೇದನೆಯಿಂದ ಬಳಲುತ್ತಿರುವ ಅಪಘಾತದ ರೋಗಿಗಳಿಗೆ, ಮನೋರೋಗಿಗಳಿಗೆ ನಿದ್ರೆ ಮಾಡಲೆಂದು ನೀಡುವ 'ಕ್ಲೋರಲ್ ಹೈಡ್ರೇಟ್' ಎಂಬ ರಸಾಯನವನ್ನು ಚುಚ್ಚಿದಾಗ ಅತಿ ಕಡಿಮೆ ಪ್ರಮಾಣದ ಬಲೆ ರಚನೆ ಮಾಡಿ ಅಂದರೆ ಶುರು ಮಾಡಿದ ಕೂಡಲೇ ನಿದ್ರಾವಸ್ಥೆಗೆ ತೆರಳಿದ್ದರಿಂದ ಬಲೆ ರಚನಾಕ್ರಿಯೆ ಕೇವಲ ಶೇಕಡಾ 10% ಸಹ ಆಗಲಿಲ್ಲವೆಂದು ಕಂಡುಬಂತು.

ಜೇಡವು ಬಲೆ ಹೆಣೆಯುವ ಉದ್ದೇಶ ತನ್ನ ಆಹಾರದ ಭೇಟೆ ಹಾಗೂ ಸಂತಾನೋತ್ಪತ್ತಿಗಾಗಿ. ಅಲ್ಲದೆ ತಾನು ಕ್ರಮಿಸುವ ದಾರಿಗೆ ಇದನ್ನೇ ಆಧಾರವಾಗಿಟ್ಟುಕೊಂಡು ಗಾಳಿಯಲ್ಲಿ ತೂರಾಡುತ್ತಾ ಜೋಕಾಲಿಯಂತೆ ಒಂದು ಮರದಿಂದ ಮತ್ತೊಂದು ಮರಕ್ಕೆ ಸಾಗುತ್ತದೆ. ಇಂತಹ ನಡಿಗೆ ಕ್ರಿಯೆಗೆ 'ಬಲೂನಿಂಗ್' ಎನ್ನುತ್ತಾರೆ. ಪರಿಸರದಲ್ಲಿರುವ ಕೀಟಗಳನ್ನು ನಿಯಂತ್ರಿಸಲು ಪ್ರಕೃತಿಯು ಮಾಡಿಟ್ಟ ಸಮತೋಲನದ ಸಿದ್ದಾಂತಕ್ಕೆ ಜೇಡಗಳು ಸಹಕಾರಿ. ವೈದ್ಯಕೀಯ ಕ್ಷೇತ್ರದಲ್ಲಿ ಇವುಗಳ ನವಿರಾದ ಎಳೆಯನ್ನು ಹೊಲಿಗೆಗಾಗಿ ಅಲ್ಲದೆ, ಇವುಗಳ ವಿಷವನ್ನು ಔಷಧಕ್ಕಾಗಿ ಬಳಸುತ್ತಾರೆ. 'ಸಂದೀಪದಿ' ವಂಶಸ್ಥರಾದ ಇವು ಹಲವು ಅತ್ಯಾಕರ್ಷಕ ಬಣ್ಣಗಳಲ್ಲಿ ಕಂಡಬರುತ್ತದೆ. ಸಾಮಾನ್ಯವಾಗಿ ಕಂದು, ಹಳದಿ, ಕೆಂಪು, ಕಪ್ಪು, ಮಿಶ್ರಿತ ಹಳದಿ, ಕೆಂಪು ಹಾಗೂ ಹಸಿರು ಬಣ್ಣದಲ್ಲಿ ನೋಡಲು ಸಿಗುತ್ತದೆ.

ಮಾನವ ತನ್ನ ಸ್ವಾರ್ಥಸಾಧನೆಗಾಗಿ. ಪರಿಸರ ವಿರೋಧಿ ಚಟುವಟಿಕೆಗಳಲ್ಲಿ ಕೈ ಜೋಡಿಸಿ, ತಾನೇ ನಿರ್ಮಿಸಿದ, ಸ್ವಾರ್ಥದ ವಿನಾಶದ ಬಲೆಯಲ್ಲಿ ಬಿದ್ದು ಅವನತಿ ಕಾಣುತ್ತಿದ್ದಾನೆ– ಅಲ್ಲವೇ?